ಸಂಪಾದಕರು:–ಶಿವಕುಮಾರ ಜಗ್ಲಿ
Editor : Shivakumar Jagli

A B

abnewsjagli@gmail.com
ಕಲ್ಯಾಣ ಕರ್ನಾಟಕದ ಹೆಮ್ಮೆಯ ಕನ್ನಡ ದಿನಪತ್ರಿಕೆ

# ಆಧ್ಯಾ ಭಾರತಿ

ಶಾಂತಿಗಾಗಿ ಸಂಘರ್ಷ

Adhya Bharati

Kannada Daily News Paper

ಪ್ರಧಾನ ಸಂಪಾದಕರು : ಶ್ರೀ ತಾಯಪ್ಪ ಬಿ.ಹೊಸೂರು

ಸಂಪುಟ 01 ಸಂಚಿಕೆ 105 ರಾಯಚೂರು RNI/PRGI NO.KNKAN/25/A0372 27-09-2025 ಶನಿವಾರ ಸುದ್ದಿಗಾಗಿ 9845562576. ಪುಟ 04 ಬೆಲೆ.ರೂ 2

# ಸಂತ ಜೋಸೇಫ್ ವಿಶ್ವವಿದ್ಯಾಲಯ ಬೆಂಗಳೂರು ವತಿಯಿಂದ ಜಾಗೃತಿ ಕಾರ್ಯಕ್ರಮ

ಎ.ಬಿ ನ್ಯೂಸ್

ಮಾನ್ವಿ: ಮದ್ಯಪಾನ ಮತ್ತು ಮಾದಕ ವಸ್ತುಗಳ ಚಟಗಳಿಗೆ ಯುವ ಸಮೂಹ ಬಲಿಯಾಗುತ್ತಿದ್ದು, ಇದನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿತಾಲೂಕಿನ ಜಾಗೀರಪನ್ನೂರು ಗ್ರಾಮದಲ್ಲಿ ಬೆಂಗಳೂರಿನ ಸಂತ ಜೋಸೇಫ್ ವಿಶ್ವವಿದ್ಯಾಲಯದ ಕಾಲೇಜು ವಿದ್ಯಾರ್ಥಿಗಳ ತಂಡ ಮತ್ತು ಲೊಯೋಲ ಸಮಾಜಸೇವೆ ಕೇಂದ್ರ ಮಾನ್ವಿ ಹಾಗೂ ಜಾಗೀರಪನ್ನೂರು ಆಶ್ರಯದಲ್ಲಿ ಗ್ರಾಮದಲ್ಲಿ ಜಾಗೃತಿ ಕಾರ್ಯಕ್ರಮವನ್ನ ಹಮ್ಮಿಕೊಂಡಿದ್ದರು. ಬೆಂಗಳೂರಿನ ವಿದ್ಯಾರ್ಥಿಗಳು ಗ್ರಾಮಕ್ಕೆ ಭೇಟಿ ನೀಡಿ ಹಳ್ಳಿಯ ವಾತವರಣ ನೋಡಿ ರೈತರ ಜೀವನ ವಿಧಾನ ಹೊಲಗದ್ದೆಗಳಿಗೆ ಭೇಟಿ ನೀಡಿ ಸಂಜೆ ವೇಳೆ ನೃತ್ಯ ಪ್ರದರ್ಶನ ಮೂಲಕ ಜನರನ್ನ ಸೇರಿಸಿ ಮನೋರಂಜನೆ ಜೊತೆಗೆ ಸಾಮಾಜಿಕ ಕಳಕಳಿಯ ಸಂದೇಶಗಳೊಂದಿಗೆ ಮಹಿಳೆಯರಿಗೆ ಶುಚಿ ಪ್ಯಾಡ್ ಬಳಕೆ ಬಾಲ್ಯ ವಿವಾಹ ತಡೆ ಬಗ್ಗೆ ಜಾಗೃತಿ ಮೂಡಿಸಿದರು. ನಾಟಕ ಮೂಲಕ ಬಾಲ್ಯವಿವಾಹ ಮಾಡುವುದು ನಿಲ್ಲಬೇಕು 'ಮಕ್ಕಳು ಆಟ ಆಡುವ ವಯಸ್ಸಿನಲ್ಲಿ ಮದುವೆ ಮಾಡುವುದು ನಿಲ್ಲಿಸಿ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಕಡೆ ಗಮನ ಹರಿಸಿ ಮಕ್ಕಳಿಗೆ ಸಹಾಯ ಮಾಡಬೇಕು. ಅದೇ ರೀತಿ ಶಿಕ್ಷಣದ ಮಹತ್ವ ಹೀಗೆ ಮದ್ಯಪಾನ ಮತ್ತು ಮಾದಕ ವಸ್ತುಗಳ ಚಟಗಳಿಗೆ ಯುವ ಸಮೂಹ ಬಲಿಯಾಗುತ್ತಿದ್ದರಿಂದ, ಮದ್ಯಸೇವನೆ ಮಾದಕ ವಸ್ತು ಗಳ ಸೇವನೆಯಿಂದ ತಮ್ಮ ಅಮೂಲ್ಯ ಜೀವನವನ್ನು ಯುವ ಜನತೆ ಹಾಳು ಮಾಡಿಕೊಳ್ಳುವ ಮೂಲಕ ತಮ್ಮ ಕುಟುಂಬವನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದ್ದಾರೆ. ಮಾದಕ ವಸ್ತುಗಳ ದುಷ್ಚಟಗಳಿಗೆ ಒಳಗಾಗದಂತೆ ನೋಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳು ಸಂದೇಶ ತಿಳಿಸಿಕೊಟ್ಟರು.



ಈ ಸಂದರ್ಭದಲ್ಲಿ ಸಂತ ಜಫಸೇಫರ್ ಕಾಲೇಜಿನ ಉಪನ್ಯಾಸಕರು ಸನಾ ಖಾನ್.ಶಂಕರ್.ಡೆರಿಕ್.ಲೊಯೋಲ ಸಮಾಜಸೇವಾ ಕೇಂದ್ರದ ಸಿಬ್ಬಂಧಿ ವರ್ಗ ರವೀಂದ್ರ ಜಾನೇಕಲ್.ಮರಿಯಪ್ಪ ಜಾಗೀರಪನ್ನೂರು ವಿಜಯಲಕ್ಷ್ಮಿ ಸಂತ ಜೋಸೇಫ್ ವಿಶ್ವವಿದ್ಯಾಲಯ ಬೆಂಗಳೂರು ವತಿಯಿಂದ ಜಾಗೃತಿ ಕಾರ್ಯಕ್ರಮ ಅನ್ನಮ್ಮ ತಿಮಲಮ್ಮ.ಬಸವರಾಜ ಹರವಿ ಪ್ರಕಾಶ ಹುಲುಗುಂಚಿ ಇನ್ನಿತರರು ಇದ್ದರು.